
ಎನ್ನುತ್ತಿದ್ದರು. ರಾಜಸ್ಥಾನದ ದೊರೆಗಳು ಬ್ರಿಟಿಷರ ಜತೆಗೆ ಅಧಿಕಾರ ಉಳಿಸಿಕೊಳ್ಳಲು ಒಡಂಬಡಿಕೆ ಮಾಡಿಕೊಂಡಿದ್ದರೆ; ಇಲ್ಲಿನ ಮರುಭೂಮಿಯ ಜನ, ಬದುಕಿಗೆ ಆಸರೆಯಾಗಿರುವ ಪ್ರವಾಸೋದ್ಯಮ ಉಳಿಸಿಕೊಳ್ಳಲು, ಇಂಗ್ಲಿಷಿನನ ಜತೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವರು.

ಧರ್ಮದ ಮೂಲಕ ಚರಿತ್ರೆಯ ಅವಶೇಷಗಳನ್ನು ನೋಡುವ ಕಣ್ನೋಟವು ಭಾರೀ ಸಮಸ್ಯಾತ್ಮಕ. ರಾಜಸ್ಥಾನದ ಪ್ರವಾಸೋದ್ಯಮವೇನೋ ಸ್ಥಳೀಯ ಇತಿಹಾಸ ಮತ್ತು ಪರಂಪರೆಗಳನ್ನು, ಪ್ರವಾಸಿಗರನ್ನು ಸೆಳೆವ ಚುಂಬಕ ವಸ್ತುವನ್ನಾಗಿ ಮಾರ್ಪಡಿಸಿದೆ. ಆದರೆ ಅದರಲ್ಲಿ ಕೆಲವು ಸಂಗತಿಗಳು ಧರ್ಮದ್ವೇಷದ ಕಹಿಯನ್ನೂ ಒಳಗೊಂಡಿವೆ. ಇದಕ್ಕೆ ಕಾರಣ, ರಾಜಸ್ಥಾನದ ರಜಪೂತ ದೊರೆಗಳ ಚರಿತ್ರೆಯು, ಮೊಗಲರ ಜತೆಗಿನ ಸ್ನೇಹ–ಸಂಘರ್ಷ–ಪ್ರೇಮ ಮತ್ತು ವಿವಾಹ ಸಂಬಂಧಗಳಿಂದ ಕೂಡಿರುವುದು. ಈ ಸಂಬಂಧಗಳು ಸಂಕೀರ್ಣವಾಗಿವೆ. ಉದಾಹರಣೆಗೆ, ರಾಣಾ ಪ್ರತಾಪಸಿಂಹನ ಸೇನಾನಿ ಮುಸ್ಲಿಮನಾಗಿದ್ದರೆ, ಅಕ್ಬರನ ಆಸ್ಥಾನದ ನವರತ್ನಗಳಲ್ಲಿ ಒಬ್ಬನೆನಿಸಿದ ಮಾನ್‌ಸಿಂಗ್, (ಅಕ್ಬರನ ರಾಣಿಯ ಸೋದರ) ರಜಪೂತನಾಗಿದ್ದ; ಜೋಧಪುರದ ಕೋಟೆಯ ಪ್ರವೇಶದ್ವಾರದಲ್ಲೇ ದೊರೆಯ ಪ್ರಿಯಸಂತನ ಸಮಾಧಿಯಿದೆ. ಶಿವಾಜಿ ವಿಷಯದಲ್ಲಿಯೂ ಇದು ನಿಜ. ಮಧ್ಯಕಾಲೀನ ಯುದ್ಧಗಳಲ್ಲಿ ಧಾರ್ಮಿಕ ಅಂಶಗಳಿದ್ದರೂ ಪ್ರಧಾನವಾಗಿ ಅವು ರಾಜಕೀಯವಾದವು. ಆದರೆ ಅರಮನೆ–ಕೋಟೆಗಳಲ್ಲಿ ಸಿಲುಕಿಕೊಂಡಿರುವ ಈ ಜಟಿಲ ರಾಜಕೀಯ ಸಂಬಂಧಗಳನ್ನು ಗೈಡುಗಳು, ಧರ್ಮಗಳ ಸೋಲು–ಗೆಲುವಿನ ಚೌಕಟ್ಟಿನಲ್ಲಿಟ್ಟು ವಿವರಿಸುವರು. ಗಲ್–ರಜಪೂತರ ಯುದ್ಧನಡೆದ ಹಳದಿಘಾಟನ್ನು ಪ್ರವಾಸಿ ತಾಣವಾಗಿಸುವಲ್ಲಿ, ಸೋಲು ಅಪಮಾನ ತುಂಬಿದ ಈ ಚೌಕಟ್ಟು ಹೆಚ್ಚು ಕೆಲಸ ಮಾಡಿದಂತಿತ್ತು.

ರಾಜಸ್ಥಾನದ ಅರಾವಳಿ ಕಾಡುಗಳ ಚಾರಣಕ್ಕೆಂದು ನಮ್ಮ ಜತೆ ಬಂದಿದ್ದ ಮಹಾರಾಷ್ಟ್ರದ ಗೆಳೆಯರು, ಕಾಡುಮೇಡುಗಳಲ್ಲಿ ತಿರುಗಾಡುವಾಗ ಪ್ರಕೃತಿಯನ್ನು ಸವಿಯುವ ರಸಿಕರೂ, ಜಾತಿಮತಗಳನ್ನು ತೆಗೆದೆಸೆದ ವಿಶ್ವಮಾನವರೂ ಆಗಿದ್ದರು. ಕಾಡಿನಿಂದ ಹೊರಬಂದು ಕೋಟೆ–ಅರಮನೆಗಳನ್ನು ಹೊಕ್ಕ ಕೂಡಲೇ, ಅವರೊಳಗೆ ಭೂತಕಾಲದ ಚರಿತ್ರೆಯ ಆವೇಶವು ಮೈದುಂಬಿತು. ರಾಜಸ್ಥಾನದ ಪ್ರವಾಸೋದ್ಯಮವು ರಾಣಾಪ್ರತಾಪನ ಚರಿತ್ರೆಯನ್ನು ಧಾರ್ಮಿಕ ಆವೇಶಕ್ಕೆ ಬಳಸಿಕೊಳ್ಳುತ್ತಿರುವ ರೀತಿ ಅವರಿಗೆ ಹಿಡಿಸಿತು. ಅವರು ಅಕ್ಬರ್–ಜೋಧಾ ಮದುವೆಯನ್ನು ಪ್ರಸ್ತಾಪಿಸುತ್ತ, ‘ನಾವು ಮರಾಠರು ಈ ತಪ್ಪನ್ನು ಮಾಡಲಿಲ್ಲ’ ಎಂದರು. ರಾಣಾಪ್ರತಾಪ ಮ್ಯೂಸಿಯಂ ನೋಡಿ ಮುಗಿಸಿದ ಬಳಿಕ ‘ಹೇಗನಿಸಿತು?’ ಎಂದರು. ‘ಬಹಳ ಉಪಯುಕ್ತವಾಗಿದೆ’ ಎಂದೆ. ‘ಓಹ್, ಮೊಗಲರಿಗೂ ಇದು ಹಿಡಿಸಿತಲ್ಲ. ಸಂತೋಷ’ ಎಂದರು. ಚರಿತ್ರೆಯ ಮತೀಯ ವ್ಯಾಖ್ಯಾನವು ಗತದ ಭಾರವನ್ನು ವರ್ತಮಾನದ ಮೇಲೆ ಹೊರಿಸಿಯೇ ವಿರಮಿಸುತ್ತದೆ.



ಗುಡ್ಡದ ಮೇಲೆ ಕಲಶದಂತೆ ನಿಂತಿರುವ ಕೋಟೆ



ಪ್ರವಾಸವೆಂದರೆ ಹೊಸ ಜನರ ಪರಿಚಯವೂ ಹೌದು... ಸ್ಥಳೀಯ ಮಹಿಳೆ ಜೊತೆ ಲೇಖಕರು

ಆದರೆ ಗತಕಾಲದ ಚರಿತ್ರೆಯು ಎಲ್ಲ ಸಂದರ್ಭದಲ್ಲೂ ಧಾರ್ಮಿಕ ರಾಗಭಾವಗಳಿಗೆ ಉಪಕರಣವಾಗಿ ಒದಗುವುದಿಲ್ಲ. ಅದು ಯಾವ ಧರ್ಮದ ಸಂಸ್ಕೃತಿಯ ಭಾಷೆಯ ಪ್ರಭಾವ ಎಲ್ಲಿದೆ ಎಂದು ಗುರುತಿಸಲಾಗದಂತೆ, ಸಂಕರರೂಪದಲ್ಲಿ ಅವತರಿಸುತ್ತದೆ. ದೆಹಲಿಯ ವಿರುದ್ಧ ರಾಜಸ್ಥಾನದ ದೊರೆಗಳು ರಾಜಕೀಯವಾಗಿ ಸಂಘರ್ಷ ಮಾಡಿದರೂ, ಮೊಗಲರ ಭಾಷೆ, ವಾಸ್ತುಶಿಲ್ಪ, ಸಂಸ್ಕೃತಿ, ಕಂದಾಯಪದ್ಧತಿಗಳಿಂದ ಪ್ರಭಾವಿತರಾದರು. ಇದನ್ನು ಅವರ ಜೀವನಶೈಲಿಯಲ್ಲಿಯೂ ಮತ್ತು ಅರಮನೆ–ಕೋಟೆಗಳ ವಾಸ್ತುಶಿಲ್ಪಗಳಲ್ಲೂ ಕಾಣಬಹುದು.

ರಾಜಕೀಯವಾಗಿ ಎದುರಾಳಿಯಾಗಿದ್ದವರು ಪರಸ್ಪರ ಸಾಂಸ್ಕೃತಿಕ ಪ್ರಭಾವಗಳನ್ನು ಪಡೆಯುವುದಕ್ಕೆ ಸರಳ ಕಾರಣ, ಅವುಗಳ ಉಪಯುಕ್ತತೆ; ಅವು ಪಡೆದುಕೊಂಡಿರುವ ಸಾರ್ವಜನಿಕ ಪ್ರತಿಷ್ಠೆಯ ಸ್ಥಾನಮಾನ. ಬ್ರಿಟಿಷರಿದ್ದ ಎರಡು ಶತಮಾನಗಳಲ್ಲಿ ಪಾಶ್ಚಾತ್ಯ ಸಾಹಿತ್ಯ, ಭಾಷೆ, ಸಂಸ್ಕೃತಿಯ ಸ್ವೀಕಾರಗಳು ಯಥೇಚ್ಛ ನಡೆದವು. ಜೋಧಪುರದ ಉಮ್ಮೈದ್ ಅರಮನೆಯಂತೂ ಬ್ರಿಟಿಷರ ಪ್ರತಿಕೃತಿ – ಬೆಂಗಳೂರಿನ ಗುಟ್ಟಹಳ್ಳಿ ಪ್ಯಾಲೇಸಿನಂತೆ. ರಾಜಸ್ಥಾನದಲ್ಲಿ ಒಂದೇ ಅರಮನೆ–ಕೋಟೆಯಲ್ಲಿ ಸ್ಥಳೀಯ, ಇಸ್ಲಾಮಿಕ್ ಮತ್ತು ಬ್ರಿಟಿಷ್ ವಾಸ್ತುಶೈಲಿಗಳು ಒಟ್ಟಿಗೆ ನೆಲೆಸಿವೆ. ವಿಭಿನ್ನ ವಾಸ್ತುಶೈಲಿಗಳ ಮಿಶ್ರಣವನ್ನು ವಿಜಯನಗರದ ಕಮಲಮಹಲಿನಲ್ಲೂ ಮೈಸೂರ ಅರಮನೆಯಲ್ಲೂ ಕಾಣಬಹುದು. ಮಧ್ಯ ಏಶಿಯಾ, ಯೂರೋಪು ಹಾಗೂ ಸ್ಥಳೀಯವಾದ ಧಾರೆಗಳು ಸಂಗಮಿಸಿದ ಕೂಡು ಸಂಸ್ಕೃತಿಯ ಚಹರೆಗಳು, ಉದಯಪುರದಲ್ಲಿ ಅನಾರ್ಕಲಿ ನೃತ್ಯದ ಗೊಂಬೆಯಾಟದಲ್ಲೂ ಕಾಣಸಿಕ್ಕವು. ಕಲಾವಿದರು ರಾಜಸ್ಥಾನೀ ನೃತ್ಯಕ್ಕೆ ಹಿನ್ನೆಲೆಯಾಗಿ, ಸಿಂಧ್ ಸೂಫಿಗಳ ‘ಧಮಾದಂ ಮಸ್ತ ಖಲಂದರ್’ ಖವಾಲಿಯನ್ನು ಬಳಸಿದರು. ರಜಪೂತ ರಾಜರ ಕೋಟೆ ಅರಮನೆಗಳೊಳಗೆ ಮುಸ್ಲಿಂ ಮೂಲದ ಮಿರಾಶಿ ಮತ್ತು ಮಾಂಗನಿಯಾರ್ ಗಾಯಕರು ವಿಶೇಷವಾಗಿದ್ದರು. ಇವರು ತಮ್ಮ ದೊರೆಯನ್ನು ಮಾತ್ರವಲ್ಲ, ಸ್ಥಳೀಯ ದೈವಗಳನ್ನು ಕುರಿತೂ ಹಾಡುವವರು. ಮುಖ್ತಿಯಾರ್ ಅಲಿ, ತಾವು ದರ್ಗಾಗಳಲ್ಲಿಯೂ ಗುಡಿಗಳಲ್ಲಿಯೂ ಹಾಡುವುದಾಗಿ ತಮ್ಮ ಸಂದರ್ಶನದಲ್ಲಿ ಹೇಳಿದ್ದು ನೆನಪಾಯಿತು.

ಅರಮನೆ–ಕೋಟೆಗಳನ್ನು ಸ್ಥಳೀಯರ ಬದುಕಿನ ಪ್ರಶ್ನೆಗಳ ಮೂಲಕ ನೋಡುವ ಕಣ್ನೋಟವೂ ಒಂದಿದೆ. ಅರಮನೆ–ಕೋಟೆಗಳನ್ನು ಪ್ರವಾಸೋದ್ಯಮವು ವೈಭವೀಕರಿಸುವಾಗ, ಸ್ಥಳೀಯರ ಗೋಳುಗಳು ಪ್ರವಾಸಿಗರ ಕಣ್ಣಿಗೆ ಬೀಳದಂತೆ ಮರೆಮಾಚಲು ಯತ್ನಿಸುತ್ತದೆ. ಆದರೆ ಈ ಹಳೆಯ ಕೋಟೆ–ಅರಮನೆಗಳ ನಡುವೆ ನಿತ್ಯ ಬದುಕುವ ಜನ, ಗತಚರಿತ್ರೆಯ ವ್ಯಾಮೋಹದಿಂದ ಹೊರಬಂದು ತಮ್ಮ ಬಾಳಿನ ಸುಡು ಅವಸ್ಥೆಯನ್ನು ನಿಷ್ಠುರವಾಗಿ ನೋಡಿಕೊಳ್ಳಬಲ್ಲರು. ಮಗನನ್ನು ದುಡಿಯಲು ಹೊರಗೆ ಕಳಿಸಿರುವ ಒಬ್ಬಾತ ಹೇಳಿದ: ‘ಸ್ವಾಮಿ, ರಾಜಸ್ಥಾನದ ಕೋಟೆ–ಅರಮನೆಗಳಿಂದ ರಾಜ್ಯಕ್ಕೆ ಪ್ರವಾಸಿಗರು ಬರುತ್ತಿದ್ದಾರೆ. ಕೆಲವರ ಕೈಲಿ ಹಣ ಓಡಾಡುತ್ತಿದೆ. ಇಲ್ಲವೆಂತಲ್ಲ. ಆದರೆ ನಮ್ಮ ಹುಡುಗರು ಮನೆಮಾರು ಬಿಟ್ಟು ಅಂಗಡಿ ಮುಂಗಟ್ಟುಗಳಲ್ಲಿ ಅಗ್ಗದ ಕೂಲಿಗೆ ದುಡಿಯಲು ಗುಜರಾತಿಗೆ ಹೋಗಿದ್ದಾರೆ. ಅವರಿಗೆ ಮದುವೆಯಾಗಿಲ್ಲ. ಅಸ್ಪೃಶ್ಯತೆ ಸಮಸ್ಯೆ ಹಳ್ಳಿಗಳಲ್ಲಿದೆ. ಅಲ್ಲಿ ಕುದುರೆ ಮೇಲೆ ಮದುಮಗನ ಮೆರವಣಿಗೆ ತೆಗೆಯುವುದೂ ಸಾಧ್ಯವಿಲ್ಲ. ನಮಗೆ ನಗರದ ಕೆಲವು ಬಡಾವಣೆಗಳಲ್ಲಿ ಬಾಡಿಗೆ ಮನೆ ಸಿಕ್ಕುವುದಿಲ್ಲ’.

ಅರಮನೆ–ಕೋಟೆಗಳಿರುವ ಪ್ರವಾಸಿ ತಾಣಗಳಿಗೆ ಹೋದರೆ, ಗತಚರಿತ್ರೆಯ ಸಾಧನೆಗಳು ಮೈನವಿರೇಳಿಸುತ್ತವೆ; ಅಲ್ಲಿ ಬದುಕುತ್ತಿರುವ ಜನರ ಜತೆ ಮಾತಿಗಿಳಿದರೆ ವರ್ತಮಾನದ ಝಳವು ಮುಖಕ್ಕೆ ಬಡಿಯುತ್ತದೆ. ಬಹುಶಃ ಚರಿತ್ರೆ ಮತ್ತು ವರ್ತಮಾನದ ಈ ಗುದುಮುರಿಗೆಯಿಂದ ಪ್ರವಾಸಿಗರಿಗೆ ಬಿಡುಗಡೆ ಇಲ್ಲವೊ ಏನೊ?

ಪ್ರತಿಕ್ರಿಯಿಸಿ: feedback@sudha.co.in